೧) ಈ ಪುಸ್ತಕಗಳಲ್ಲಿ ಮುಖ್ಯ ಮಂತ್ರಿಯವರು ಪ್ರಧಾನಿಯವರೊಡನೆ ಹಾಗೂ ಮಹಾರಾಷ್ಟ್ರ ಸೀಮಾ ಸಮಿತಿಯ ನಾಯಕರುಗಳೊಡನೆ ನಡೆಸಿದ ಪತ್ರ ವ್ಯವಹಾರ, ಪತ್ರಿಕೆಗಳು ಈ ಬಗ್ಗೆ ಪ್ರಕಟಿಸಿದ ಅಗ್ರಲೇಖ ಮತ್ತು ಲೇಖನಗಳು ಹಾಗೂ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ಭಾಷೆಯ ಬಗ್ಗೆ ಹೊರಡಿಸಿರುವ ಕೆಲವು ಆದೇಶಗಳನ್ನು ಪ್ರಕಟ ಪಡಿಸಲಾಗಿದೆ. ಈ ಪುಸ್ತಕಗಳು ಜನಗಳಿಗೆ ಪೂರ್ಣ ಮಾಹಿತಿಯನ್ನು ನೀಡುತ್ತವೆ. ಇಷ್ಟು ಸಮರ್ಪಕವಾಗಿ ಪತ್ರಿಕೆಗಳ ಮೂಲಕ ಮಾಹಿತಿಯನ್ನು ಜನಗಳಿಗೆ ಬಿತ್ತರಿಸಲು ಸಾಧ್ಯವಾಗುತ್ತಿರಲಿಲ್ಲ. ಹಾಗೇನಾದರೂ ಮಾಡಿದ್ದಲ್ಲಿ ವೆಚ್ಚ ಇನ್ನೂ ಹೆಚ್ಚಾಗುತ್ತಿತ್ತು.

ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಅಭ್ಯರ್ಥಿಗಳಿಗೆ ಪ್ರವೇಶ ನೀಡುವುದರಲ್ಲಿ ತಾರತಮ್ಯದ ಕುರಿತು.

೩೩೩. ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ):— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೬೫೨ನ್ನು ದಿನಾಂಕ ೨೨-೭-೧೯೮೫ ರಂದು ಉತ್ತರಿಸುವಾಗ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸ್ಥಳಗಳಿಗೆ ಸೇರಿಸಿಕೊಳ್ಳುವಾಗ ಉದ್ಭವಿಸುವ ತಾರತಮ್ಯಗಳನ್ನು ಹೋಗಲಾಡಿಸಲು ಒಂದು ಸದನದ ಸಮಿತಿಯನ್ನು ರಚಿಸುವುದಾಗಿ ಭರವಸೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಅದನ್ನು ಇದುವರೆವಿಗೂ ಕಾರ್ಯಗತಗೊಳಿಸದಿರುವುದಕ್ಕೆ ಕಾರಣಗಳೇನು ?

ಆ) ಈಗಲಾದರೂ ರಾಜ್ಯದ ವಿವಿಧ ಭಾಗಗಳಿಗೆ ಸೇರಿದ ಜನರಿಗೆ ನ್ಯಾಯವನ್ನು ಕೊಡಲು ತುರ್ತು ಕ್ರಮ ತೆಗೆದುಕೊಳ್ಳಲಾಗುವುದೇ ?

ಇ) ಯಾವ ಅವಧಿಯೊಳಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೨೨-೭-೧೯೮೫ ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೬೫೨ನ್ನು ಉತ್ತರಿಸುವಾಗ ಆ ರೀತಿಯ ಭರವಸೆ ಯಾವುದನ್ನೂ ಕೊಟ್ಟಿರಲಿಲ್ಲ. ಸದನದ ಸಮಿತಿಯ ರಚನೆ ವಿಧಾನ ಮಂಡಲದ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

ಆ) ದಿನಾಂಕ ೧೯-೮-೧೯೮೬ ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೨೯ (ಬಿ) ಯನ್ನು ಉತ್ತರಿಸುವ ಸಮಯದಲ್ಲಿ ವಿಧಾನ ಸಭೆಯ ಅಧ್ಯಕ್ಷರು ಸದನದ ಸಮಿತಿಯ ರಚನೆಯ ವಿಷಯವನ್ನು ಪರಿಶೀಲಿಸಲು ಒಪ್ಪಿಕೊಂಡರು. ಈ ವಿಷಯದಲ್ಲಿ ಸದನದ ಸಮಿತಿಯ ರಚನೆ ಮತ್ತು ಅದರ ವರದಿಯನ್ನು ಮುಂದಿನ ಕ್ರಮವನ್ನು ನಿರ್ಮಾನಿಸುವುದಕ್ಕೆ ಮುಂಚೆ ಕಾಯಬೇಕಾಗುತ್ತದೆ.

ಇ) 'ಅ' ಮತ್ತು 'ಆ'ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮಂಡಿಕೇರಿ ಬಂದ್

೫೬೯. ಶ್ರೀ ಡಿ.ಎ. ಚನ್ನಪ್ಪ (ಮಡಿಕೇರಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೭-೭-೧೯೮೬ ರಂದು ಮಡಿಕೇರಿ ಬಂದ್‌ಗೆ ಕರೆ ಕೊಡಲಾಗಿತ್ತೆ ಮತ್ತು ಇಡೀ ಜಿಲ್ಲೆಯಲ್ಲೆಲ್ಲಾ ಭಾಗಶಃ ಬಂದ್ ಆಚರಿಸಲಾಯಿತೇ ?

ಆ) ಹಾಗಿದ್ದಲ್ಲಿ ಬಂದನ್ನು ತಡೆಗಟ್ಟಲು ಪೋಲೀಸರು ಸೂಕ್ತ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಇ) ದಿನಾಂಕ ೬-೭-೧೯೮೬ ರಾತ್ರಿ ೯ ರಿಂದ ೭-೭-೧೯೮೬ರ ಬೆಳಗ್ಗಿನವರೆಗೆ ಮಡಿಕೇರಿಯಿಂದ ಸುಮಾರು ೧೦ ಕಿ.ಮೀ ವರೆಗಿನ ಪ್ರದೇಶಗಳ ರಸ್ತೆಗಳ ಬದಿಯಲ್ಲಿದ್ದ ೩೦ ಮರಗಳನ್ನು ಕಡಿದು ರಸ್ತೆಯ ಮಧ್ಯಕ್ಕೆ ಹಾಕಿದ್ದರೂ, ಪೋಲೀಸರು ಇದರ ಬಗ್ಗೆ ಯಾವ ಕ್ರಮವನ್ನು ತೆಗೆದು ಕೊಂಡಿಲ್ಲ, ಇದಕ್ಕೆ ಕಾರಣಗಳೇನು ?